ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2017–18 ದಿನಾಂಕ: 26–07–2017

## ಪತ್ರಿಕಾ ಆಮಂತ್ರಣ

1. ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದ ವತಿಯಿಂದ **"Household Consumer Expenditure & Social Consumption on Health and Education"** ಎಂಬ ವಿಷಯ ಕುರಿತು ರಾಷ್ಟ್ರೀಯ ಮಾದರಿ ಸಮೀಕ್ಷೆ 75 ನೇ ಸುತ್ತಿನ ರಾಜ್ಯಮಟ್ಟದ ತರಬೇತಿ ಕಾರ್ಯಾಗಾರ.

ದಿನಾಂಕ: 27–07–2017, ಗುರುವಾರ, ಸಮಯ : ಬೆಳಿಗ್ಗೆ 10.30 ಗಂಟೆಗೆ.

ಸ್ಥಳ: ಹೆಚ್.ಆರ್. ಅರಕೇರಿ ಸಭಾಂಗಣ, ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣ, (ಐ.ಎ.ಟಿ.) ನಂ. 15, ಕ್ವೀನ್ಸ್ ರಸ್ತೆ, ಬೆಂಗಳೂರು – 560 052.

2. ಜಂಟಿ ಪತ್ರಿಕಾಗೋಷ್ಠಿ:

ಕೃಷ್ಣ ಬೈರೇಗೌಡ, ಕೃಷಿ ಸಚಿವರು.

ಹಾಗೂ

ಟಿ.ಬಿ. ಜಯಚಂದ್ರ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಸಣ್ಣ ನೀರಾವರಿ ಸಚಿವರು

ದಿನಾಂಕ: 27–07–2017, ಗುರುವಾರ, ಸಮಯ : ಸಂಜೆ 4–00 ಗಂಟೆಗೆ.

ಸ್ಥಳ: ಕೊಠಡಿ ಸಂಖ್ಯೆ 317, ವಿಕಾಸಸೌಧ, ಬೆಂಗಳೂರು.

**<u>ಪತ್ರಿಕಾ ಪ್ರಕಟಣೆ</u>**

# ಅರಣ್ಯ ಇಲಾಖೆಯಿಂದ ಅರಿವು ಮೂಡಿಸಲು ಸಪ್ತಾಹ

ಬೆಂಗಳೂರು, ಜುಲೈ 26 (ಕರ್ನಾಟಕ ವಾರ್ತೆ)

ಸಾರ್ವಜನಿಕರಿಗೆ ಅರಣ್ಯ ಇಲಾಖೆಯ ಕಾಯ್ದೆಗಳು ಹಾಗೂ ಯೋಜನೆಗಳ ಅರಿವು ಮೂಡಿಸುವ ಕಾರ್ಯ ಪರಿಣಾಮಕಾರಿಯಾಗಿ ಆಗಬೇಕು ಆದ್ದರಿಂದ ವಿಶೇಷ ಸಪ್ತಾಹವನ್ನು ಹಮ್ಮಿಕೊಳ್ಳಲು ಯೋಜಿಸಲಾಗಿದೆ ಎಂದು ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಪುನಟಿ ಶ್ರೀಧರ್ ಅವರು ತಿಳಿಸಿದರು.

ಅರಣ್ಯ ಇಲಾಖೆಯ ಕಾರ್ಯಗಳ ಕುರಿತು ಸಾರ್ವಜನಿಕರಿಗೆ ಹಾಗೂ ಮಾಧ್ಯಮಗಳಿಗೆ ತಿಳಿಯಪಡಿಸುವಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಇಂದು ಅರಣ್ಯ ಇಲಾಖೆಯ ಮುಖ್ಯ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿ ಇಲಾಖೆ ಕೈಗೊಳ್ಳಬೇಕಾದ ಕಾರ್ಯಗಳು ಹಾಗೂ ಮಾಧ್ಯಮ ಸ್ನೇಹಿಯಾಗಿ ರೂಪಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಕಾಡಿನಂಚಿನಲ್ಲಿ ಅರಣ್ಯ ಇಲಾಖೆ ಸಾರ್ವಜನಿಕರಿಗೆ ನೀಡಿರುವ ಹಕ್ಕುಪತ್ರ ಕೇವಲ ಅವರ ಹಕ್ಕಿಗೆ ಸಂಬಂಧಿಸಿದಾಗಿದ್ದು ಅದನ್ನು ಅವರು ಇನ್ನೊಬ್ಬರಿಗೆ ಮಾರಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಿದ ಅವರು ಈ ರೀತಿಯ ಅನೇಕ ಕಾಯ್ದೆಗಳು ಮತ್ತು ಯೋಜನೆಗಳನ್ನು ಜನರಿಗೆ ಮನದಟ್ಟು ಮಾಡಲು ಇಲಾಖೆ ಕೈಗೊಳ್ಳಬೇಕಾದ ಕ್ರಮಗಳಿಗಾಗಿ ಸಲಹೆಗಳನ್ನು ಪಡೆಯಲು ಈ ಸಂವಾದವನ್ನು ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಕೇಂದ್ರಸ್ಥಾನ ಮತ್ತು ಸಮನ್ವಯ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಡಾ. ಕೆ.ಎನ್. ಮೂರ್ತಿ ಅವರು  ಮಾತನಾಡಿ ಉಳಿದಿರುವ ಅರಣ್ಯವನ್ನು ಕಾಪಾಡಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.  ಇದೇ ರೀತಿ ಪರಿಸರ ಹಾಳಾದಲ್ಲಿ  ಇಂದು ಪ್ರಾಣಿ ಪಕ್ಷಿಗಳಿಗೆ ಆಗಿರುವ ಸ್ಥಿತಿ ಇನ್ನೂ ಇಪ್ಪತ್ತು ವರ್ಷಗಳಲ್ಲಿ ಮನುಷ್ಯರಿಗೂ ಸಹ ಬರಬಹುದು ಎಂದು ಕಳವಳ ವ್ಯಕ್ತಪಡಿಸಿದರು.

ಅರಣ್ಯ ಇಲಾಖೆಯ ಯೋಜನೆಗಳಾದ ಚಿಣ್ಣರ ಅರಣ್ಯ ದರ್ಶನ, ಶ್ರೀಗಂಧ ಬೆಳೆಯುವುದು ಮತ್ತು ಬೆಳೆದ ತೇಗದ ಮರಗಳನ್ನು ಮಾರುವ ಕಾಯ್ದೆ ಕುರಿತು ಸತತವಾಗಿ ಎರಡರಿಂದ ಮೂರು ವರ್ಷದ ಪ್ರಚಾರ ಸಪ್ತಾಹವನ್ನು ಹಮ್ಮಿಕೊಂಡು ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ

ವಿಶೇಷ ಕಾರ್ಯಕ್ರಮಗಳನ್ನು ಸರ್ಕಾರದ ವಿವಿಧ ಇಲಾಖೆಗಳ ಮೂಲಕ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸಂವಾದದಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳಾದ ಅಜಯ್ ಮಿಶ್ರ, ಶ್ರೀಮತಿ ಅನಿತಾ ರೇಕಲ್, ಶಿವರಾಜ್ ಸಿಂಗ್, ಜಿ.ಎಸ್. ಯಾದವ್, ಕಾಂತರಾಜ್, ಮನೋಜ್ ಹಾಗೂ ಪರಿಸರವಾದಿಗಳು, ಕಾಡಿನಂಚಿನ ಜಿಲ್ಲೆಗಳ ಮಾಧ್ಯಮದವರು ಮತ್ತು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು.

ಎಸ್‌ಎಂ:ಜೆಡಿ:ಜಿಪಿಆರ್

# ಕರ್ನಾಟಕ ಮಾಧ್ಯಮ ಮಾನ್ಯತಾ ಸಮಿತಿ ರಚನೆ

**ಬೆಂಗಳೂರು, ಜುಲೈ 26 (ಕರ್ನಾಟಕ ವಾರ್ತೆ)**

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪತ್ರಕರ್ತರಿಗೆ ನೀಡುವ ಮಾಧ್ಯಮ ಮಾನ್ಯತಾ ಪತ್ರದ ಹೊಸ ಸಮಿತಿಯನ್ನು ರಚಿಸಿ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಮಾಧ್ಯಮ ಮಾನ್ಯತಾ ನಿಯಮ 2009ರ ಪ್ರಕಾರ ಮಾಧ್ಯಮ ಮಾನ್ಯತಾ ಸಮಿತಿಯನ್ನು ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಯಾವುದೂ ಮೊದಲೋ ಅಲ್ಲಿಯವರೆಗೆ ಈ ಸಮಿತಿ ಜಾರಿಯಲ್ಲಿರುತ್ತದೆ.

ಸಮಿತಿಯ ಅಧ್ಯಕ್ಷರಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರು ಇರಲಿದ್ದು ಸದಸ್ಯರಾಗಿ ದಿಲೀಪ್ ಕುಂದರವಾಡೆ, ಜಿಲ್ಲಾ ವರದಿಗಾರರು, ಪಬ್ಲಿಕ್ ಟಿವಿ, ಬೆಳಗಾವಿ, ಕಾರ್ಯನಿರತ ಪತ್ರಕರ್ತರ ಸಂಘದ ಪ್ರತಿನಿಧಿ, ಲಕ್ಷ್ಮೀನಾರಾಯಣ, ಹಿರಿಯ ವರದಿಗಾರರು, ಉದಯವಾಣಿ ಪತ್ರಿಕೆ, ಬೆಂಗಳೂರು ವರದಿಗಾರರ ಒಕ್ಕೂಟದ ಮುದ್ರಣ ಮಾಧ್ಯಮದ ಪ್ರತಿನಿಧಿ, ಹೆಚ್. ವಿ. ಕಿರಣ್, ಟಿವಿ–9 ಹಿರಿಯ ವರದಿಗಾರರು, ವಿದ್ಯುನ್ಮಾನ ಮಾಧ್ಯಮದ ಪ್ರತಿನಿಧಿ, ಹೆಚ್.ಎಲ್. ಸುರೇಶ್, ಸಂಪಾದಕರು, ವಾಸ್ತವ ಕನ್ನಡ ದಿನಪತ್ರಿಕೆ, ಕೋಲಾರ ಜಿಲ್ಲೆ, ರಾಜ್ಯ, ಜಿಲ್ಲಾ ಮತ್ತು ಮಾಧ್ಯಮ ಪತ್ರಿಕೆಗಳ ಸಂಪಾದಕರ ಸಂಘದ ಪ್ರತಿನಿಧಿ, ಪಿ.ವಿ. ವಿನೋದಕುಮಾರ್, ದಿ ಇಂಡಿಯನ್ ಎಕ್ಸ್‌ಪ್ರೆಸ್, ಛಾಯಾಗ್ರಾಹಕರು, ಬೆಂಗಳೂರು ಛಾಯಾಗ್ರಾಹಕರ ಒಕ್ಕೂಟದ ಪ್ರತಿನಿಧಿ, ಶ್ರೀಮತಿ ದೀಪಾ ಬಾಲಕೃಷ್ಣನ್, ಮಹಿಳಾ ಪ್ರತಿನಿಧಿ, ಹಿರಿಯ ವರದಿಗಾರರು ಸಿ.ಎನ್.ಎನ್./ಐ.ಬಿ.ಎನ್. ಶಿವಕುಮಾರ್ ಬೆಳ್ಳಿತಟ್ಟೆ, ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ಪ್ರತಿನಿಧಿ, ಶ್ರೀ ಮಲ್ಲಿಕ ಬುರ್ಹಾನ್, ವರದಿಗಾರರು, ಸಿಯಾಸತ್ ಉರ್ದು ದಿನ ಪತ್ರಿಕೆ ಇವರುಗಳು ಕಾರ್ಯನಿರ್ವಹಿಸಲಿದ್ದಾರೆ.

ಇಲಾಖಾ ಕೇಂದ್ರ ಕಚೇರಿಯ ಸುದ್ದಿ ಮತ್ತು ಪತ್ರಿಕಾ ಶಾಖೆಯ ಉಪ ನಿರ್ದೇಶಕರು, ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

## ಮಸಾಜ್ ಸೆಂಟರ್ ನೋಂದಾವಣೆ ಕಡ್ಡಾಯ

**ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)**

ಕೆ.ಪಿ.ಎಂ.ಇ. ಆಕ್ಟ್ 2007 ನಿಯಮ 2009 ರನ್ವಯ ಅನಧಿಕೃತವಾಗಿ ನಡೆಸಲಾಗುತ್ತಿರುವ ಮಸಾಜ್ ಸೆಂಟರ್‌ಗಳು ತಮ್ಮ ಸಂಸ್ಥೆಯನ್ನು ಕೂಡಲೇ ತಮ್ಮ ವ್ಯಾಪ್ತಿಗೊಳಪಡುವ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಲ್ಲಿ ನಿಯಮಾನುಸಾರ ನೋಂದಾವಣೆ ಮಾಡಿಕೊಳ್ಳುವುದು ಕಡ್ಡಾಯ ಎಂದು ಆಯುಷ್ ಇಲಾಖೆಯ ಪ್ರಕಟಣೆ ತಿಳಿಸಿದೆ.

ರಾಜ್ಯದಲ್ಲಿ ಅನೇಕ ಮಸಾಜ್ ಸೆಂಟರ್‌ಗಳು ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ ಅಧಿನಿಯಮದ (ಕೆ.ಪಿ.ಎಂ.ಇ.) ಆಕ್ಟ್ 2007 ನಿಯಮ 2009 ರನ್ವಯ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿದ್ದರೂ ನೋಂದಾವಣಿ ಮಾಡಿಕೊಳ್ಳದೇ ನಡೆಸುತ್ತಿರುವುದು ತಿಳಿದು ಬಂದಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಕೆಪಿಎಂಇ ಅಧಿಕೃತ ವೆಬ್‌ಸೈಟ್‌ಗೆ ಲಾಗಿನ್ ಆಗಲು ಪ್ರಕಟಣೆ ತಿಳಿಸಿದೆ.

## ವಿಧಾನ ಸೌಧ ಆವರಣದಲ್ಲಿ ಮಹರ್ಷಿ ವಾಲ್ಮೀಕಿ ವಿಗ್ರಹ

**ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)**

ವಿಧಾನ ಸೌಧದ ಪಶ್ಚಿಮ ದ್ವಾರದ ಬಲಭಾಗದಲ್ಲಿರುವ ರಾಕ್‌ಗಾರ್ಡನ್‌ನಲ್ಲಿ ಆದಿ ಮಹರ್ಷಿ ತಪೋವನ ಹಾಗೂ ಪುತ್ಥಳಿ ನಿರ್ಮಾಣಕ್ಕೆ ಮುಖ್ಯಮಂತ್ರಿಯವರು ಆದೇಶಿಸಿ ಒಂದು ಕೋಟಿ ರೂ. ಬಿಡುಗಡೆ ಮಾಡಿದ್ದಾರೆ. ಇನ್ನು ಒಂದುವರೆ ತಿಂಗಳಲ್ಲಿ ವಿಗ್ರಹ ಅನಾವರಣ ಮಾಡಲಾಗುವುದು ಎಂದು ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಸಮಿತಿ ಅಧ್ಯಕ್ಷ ಉಗ್ರಪ್ಪ ಅವರು ತಿಳಿಸಿದರು.

ಸುತ್ತಲೂ ಉದ್ಯಾನ ಅಭಿವೃದ್ಧಿಗೆ ತೋಟಗಾರಿಕೆ ಇಲಾಖೆಯಿಂದ 30.00 ಲಕ್ಷ ರೂ. ಅಂದಾಜು ವೆಚ್ಚದಲ್ಲಿ ಕ್ರಿಯಾ ಯೋಜನೆ ರೂಪಿಸಲಾಗಿದೆ. ವಾಲ್ಮೀಕಿ ಜನಾಂಗದವರು 50.00 ಲಕ್ಷ ರೂ. ವೆಚ್ಚದಲ್ಲಿ 25 ಟನ್ ತೂಕದ 12 ಅಡಿ ಎತ್ತರದ ಕಪ್ಪು ಶಿಲೆ ವಿಗ್ರಹವನ್ನು ತಮಿಳುನಾಡಿನ ಮಹಾಬಲಿಪುರಂನಲ್ಲಿ ಕೆತ್ತಿಸಿದ್ದಾರೆ. ಇಂದು ಮಧ್ಯರಾತ್ರಿ ವಾಲ್ಮೀಕಿ ಪುತ್ಥಳಿ ಬೆಂಗಳೂರಿಗೆ ಆಗಮಿಸಲಿದ್ದು ನಾಳೆ ಪೀಠದ ಮೇಲೆ ವಿಗ್ರಹ ಸ್ಥಾಪನೆ ಕೆಲಸ ಆರಂಭವಾಗಲಿದೆ. ಇನ್ನು ಒಂದುವರೆ ತಿಂಗಳಲ್ಲಿ ವಿಗ್ರಹ ಅನಾವರಣ ಮಾಡಲಾಗುವುದು ಎಂದು ಅವರು ಇಂದು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

## ಮೂಲ ದಾಖಲೆಗಳ ಪರಿಶೀಲನೆ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ದಿನಾಂಕ: 5-10-2016 ರಲ್ಲಿ ಅಧಿಸೂಚಿಸಲಾಗಿರುವ ಈ ಕೆಳಕಂಡ ಹುದ್ದೆಗಳ 1:2 ಅನುಪಾತದಲ್ಲಿ ಮೂಲ ದಾಖಲೆಗಳ ಪರಿಶೀಲನೆಗೆ ಅರ್ಹರಾದ ಅಭ್ಯರ್ಥಿಗಳ ಅರ್ಹತಾ ಪಟ್ಟಿಯನ್ನು ದಿ:26-7-2017 ರಂದು ಆಯೋಗದ ವೆಬ್‌ಸೈಟ್ www.kpsc.kar.nic.in ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ. 1. ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿನ ಗಣಿತ ಶಿಕ್ಷಕರು-21 (15+06 ಹೈ.ಕ.) ಹುದ್ದೆಗಳು. ಅಲ್ಪಸಂಖ್ಯಾತರ ನಿರ್ದೇಶನಾಲಯದಲ್ಲಿನ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ. ಮೇಲ್ವಿಚಾರಕರು(ಮಹಿಳೆ 09(06+03 ಹೈ.ಕ) ಹುದ್ದೆಗಳು. ಸಾರ್ವಜನಿಕ ಗ್ರಂಥಾಲಯ ಇಲಾಖೆಯಲ್ಲಿನ ಸಹಾಯಕ ಗ್ರಂಥಪಾಲಕ 11 (ಹೈ.ಕ.) ಹುದ್ದೆಗಳು ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

## ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟ

ಬೆಂಗಳೂರು, ಜುಲೈ 25 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ದಿನಾಂಕ: 4-8-2016 ರಲ್ಲಿ ಅಧಿಸೂಚಿಸಲಾಗಿರುವ ಪೊಲೀಸ್ ಇಲಾಖೆಯ ನ್ಯಾಯ ವಿಜ್ಞಾನ ಪ್ರಯೋಗದಲ್ಲಿನ ವೈಜ್ಞಾನಿಕ

ಅಧಿಕಾರಿ (ವಿಷ ವಿಜ್ಞಾನ ವಿಭಾಗ/ರಸಾಯನಿಕ ವಿಭಾಗ) ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿಯನ್ನು 26–7–2017 ರಂದು ಆಯೋಗದ ವೆಬ್‌ಸೈಟ್ **www.kpsc.kar.nic.in/Selection List** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

ಆಕ್ಷೇಪಣೆಗಳನ್ನು ಸಲ್ಲಿಸಲು ಬಯಸುವ ಅಭ್ಯರ್ಥಿಗಳು ದಿನಾಂಕ 1–8–2017 ರೊಳಗಾಗಿ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–1 ಇವರಿಗೆ ಸಲ್ಲಿಸಬಹುದು ನಿಗದಿತ ದಿನಾಂಕದ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಆಯೋಗದ ಪ್ರಕಟಣೆ ತಿಳಿಸಿದೆ.